ಎಂವಿಸಿ 27/2025
PW-1

**ಸಾಕ್ಷಿಯನ್ನು ದಿನಾಂಕ 24-10-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು- 2ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ ವಕೀಲರಿಂದಃ**

4. ದಿನಾಂಕ 22-10-2024 ರಂದು ನಾನು ನನ್ನ ಯಮಹ ದ್ವಿಚಕ್ರ ವಾಹನ ಸಂಖ್ಯೆ KA-12-S-4494 ರಲ್ಲಿ ಮಡಿಕೇರಿಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದೆ. ಸದರಿ ದ್ವಿಚಕ್ರ ವಾಹನದ ಆರ್.ಸಿ ಮಾಲಿಕ ನಾನಾಗಿರುತ್ತೇನೆ. ಸದರಿ ದ್ವಿಚಕ್ರ ವಾಹನವನ್ನು ಓಡಿಸಲು ನನ್ನ ಬಳಿ ಚಾಲನ ಪರವಾನಗೆ ಇತ್ತು. ಅಪಘಾತವಾಯಿತು ಎನ್ನಲಾದ ಸ್ಥಳದಲ್ಲಿ ರಸ್ತೆ ಸ್ವಲ್ಪ ಇಳಿಜಾರಾಗಿತ್ತು. ಸದರಿ ರಸ್ತೆ ತುಂಬಾ ತಿರುವಿನಿಂದ ಕೂಡಿದ ರಸ್ತೆ ಎಂದರೆ ಸರಿ. ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಆಗಿತ್ತು ಎಂದರೆ ಸರಿ. ಅಪಘಾತವಾದ ಸ್ಥಳದಿಂದ ನಾನು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಅಂದಾಜು 7 ಕಿ.ಲೋ ಮೀಟರ್ ದೂರ ಇದೆ. ಅಪಘಾತವು MRF ಶೋರೂಂ ನಿಂದ ಮುಂದೇ ಎರಡನೇ ತಿರುವಿನಲ್ಲಿ ಆಗಿತ್ತು. ಇಳಿಜಾರು ರಸ್ತೆಯಿಂದ ಅತೀ ವೇಗದಿಂದ ಮತ್ತು ಅಜಾಗರೂಕತೆಯಿಂದ ನಾನು ದ್ವಿಚಕ್ರ ವಾಹನವನ್ನು ಚಲಾಯಿಸಿದ ಕಾರಣ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ಕಾರಿನ ಚಾಲಕನು

ಅತೀವೇಗ ಮತ್ತು ನಿರ್ಲಕ್ಷ್ಯ ತನದಿಂದ ಕಾರನ್ನು ಚಾಲಯಿಸಿರಲಿಲ್ಲ ಮತ್ತು ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಬಾಬ್ತು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಕಾಣಿಸಿದಂತಹ ಯಾವುದೇ ಗಾಯಗಳು ನನಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ತದನಂತರ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಕೈಬೆರಳುಗಳಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಮತ್ತು ವೈದ್ಯಕೀಯ ಚಿಕಿತ್ಸೆಗಾಗಿ ರೂ. 5,00,000/- ಖರ್ಚು ಆಗಿರಲಿಲ್ಲ ಎಂದರೆ ಸರಿಯಲ್ಲ. ಇನ್ನು ಹೆಚ್ಚಿನ ಚಿಕಿತ್ಸೆಗಾಗಿ ರೂ. 1,00,000/- ಹಣದ ಅಗತ್ಯ ಇರುತ್ತದೆ ಎಂದು ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಈಗ ನಾನು ಮಡಿಕೇರಿಯ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಈಗ ನನ್ನ ಸಂಬಳ

ತಿಂಗಳಿಗೆ ರೂ. 10,000/- ಆಗಿರುತ್ತದೆ. ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಸಲ್ಲಿಸಿದ ಪ್ರಮಾಣ ಪತ್ರವದಲ್ಲಿ 3ನೇ ಪ್ಯಾರಾದಲ್ಲಿ ಅಪಘಾತವಾದ ಸಮಯದಲ್ಲಿ ಮಡಿಕೇರಿಯ Quarry Adventure ನಲ್ಲಿ ಮ್ಯಾನೇಜರ್ ಆಗಿ ಮತ್ತು ಡಾನ್ಸ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದು, ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಈವರೆಗೆ ಸಲ್ಲಿಸಿಲ್ಲ. ಅಪಘಾತವಾದ ಸಮಯ ನನ್ನ ತಿಂಗಳ ಆದಾಯ ರೂ. 30,000/- ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಈವರೆಗೆ ಸಲ್ಲಿಸಿಲ್ಲ. ನಾನು ಅಪಘಾತವಾಯಿತು ಎನ್ನಲಾಯ ಸಮಯದಲ್ಲಿ ಮಡಿಕೇರಿಯ Quarry Adventure ನಲ್ಲಿ ಮಾನ್ಯೇಜರ್ ಅಗಿ ಮತ್ತು ಡಾನ್ಸ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದು, ನನಗೆ ತಿಂಗಳಿಗೆ ರೂ. 30,000/- ವರಮಾನ ಇತ್ತು ಎಂದು ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಮಾಮೂಲಿಯಂತೆ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದು, ನನಗೆ ಯಾವುದೇ ಅಂಗ ನ್ಯೂನತೆಗಳು ಇಲ್ಲ ಎಂದರೆ ಸರಿಯಲ್ಲ. ನನಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು

ನ್ಯಾಯಾಲಯದಲ್ಲಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಪಡೆದೆ ಎನ್ನಲಾದ ಮಡಿಕೇರಿ ಜಿಲ್ಲಾ ಆಸ್ಪತ್ರೆ ಮತ್ತು ಮೈಸೂರಿನ ಕೆ.ಆರ್ ಆಸ್ಪತ್ರೆ ಸರ್ಕಾರಿ ಆಸ್ಪತ್ರೆಗಳಾಗಿದ್ದು, ಅಲ್ಲಿ ನನಗೆ ಉಚಿತವಾಗಿ ಚಿಕಿತ್ಸೆಗಳನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ.

**ಪಾಟೀಸವಾಲು- 1ನೇ ಎದುರುದಾರರ ಪರ ಶ್ರೀ KWP ವಕೀಲರನ್ನು ಕರೆಯಲಾಗಿ ಅವರು ಗೈರು ಹಾಜರಿರುವುದರಿಂದ 1ನೇ ಎದುರುದಾರರ ಪರ ಸಾಕ್ಷಿಯ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-XXX

1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.